ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ
**Karnataka State Rural Development and Panchayat Raj University**

ರೈತ ಭವನ, ಜನರಲ್‌ಕಾರ್ಯಪ್ಪ ವೃತ್ತ, ಗದಗ– 582 101
**RaithaBhavana, General Cariappa Circle, Gadag – 582 101**
**E-mail: ksrdpruadmissions@gmail.com Phone: 08372-230338, Fax: 08372-297343**

News about distribution of COVID Medicine Kit to University Staff published in Kannada Daily Newspaper Date: 16.04.2021




ಕೋವಿಡ್ ಸಂದರ್ಭದಲ್ಲಿ ಗ್ರಾಮೀಣಾಭಿವೃದ್ಧಿ ವಿವಿಯಿಂದ ನಡೆಯುತ್ತಿರುವ ಸಮಾಜಮುಖಿ ಕಾರ್ಯದಲ್ಲಿ ಮುಂಚೂಣಿ ಕಾರ್ಯಕರ್ತರಾಗಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳಿಗೆ ವಿವಿಯ ಯುಥ್ ರೆಡ್ ಕ್ರಾಸ್ ಕೋಶದ ವತಿಯಿಂದ ಕೋವಿಡ್‌ಕಿಟ್ ವಿತರಿಸಲಾಯಿತು.

## ಕೋವಿಡ್ ಕಿಟ್ ವಿತರಣಾ ಕಾರ್ಯಕ್ರಮ



ಗದಗ, ೧೫ : ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ ಗದಗ, ಸಭಾಂಗಣದಲ್ಲಿ ಯುಥ್ ರೆಡ್ ಕ್ರಾಸ್ ಕೋಶದ ವತಿಯಿಂದ ಮುಂಚೂಣಿ ಕಾರ್ಯಕರ್ತರಿಗೆ ಕೋವಿಡ್ ಕಿಟ್‌ನ್ನು ವಿತರಿಸಲಾಯಿತು. ವಿಶ್ವವಿದ್ಯಾಲಯವು ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಸಾರ್ವಜನಿಕವಾಗಿ ತುರ್ತು ಸೇವೆಗಳ ಅಗತ್ಯ ಹಾಗೂ ಆದ್ಯತೆಗನುಸಾರವಾಗಿ ಹಲವು ಉಪಕ್ರಮಗಳನ್ನು ಹಮ್ಮಿಕೊಂಡಿದ್ದು, ಕೋವಿಡ್ ರೋಗಿಗಳ ಸೇವಾ ನಿರತ ಸಿಬ್ಬಂದಿಗಳಿಗೆ ಹಾಗೂ ಜೊತೆ ಇರುವ ಸಂಬಂಧಿಕರಿಗೆ ಆಹಾರ ವಿತರಣಾ ಕಾರ್ಯಕ್ರಮ, ನೆರವು ಸಹಾಯವಾಣಿ ಕೇಂದ್ರ, ಜಿಲ್ಲಾಡಳಿತ ಸಹಯೋಗದೊಂದಿಗೆ ವಾರ್-ರೂಮ್ ಸ್ಥಾಪನೆ, ರಕ್ತದಾನ ಹಾಗೂ ಪ್ಲಾಸ್ಮಾದಾನ- ಅರಿವು ಹಾಗೂ ಪ್ರೇರೇಪಣೆ, ಬೀದಿ ಬದಿಯ ದನಕರುಗಳು ಹಾಗೂ ಜಾನುವಾರುಗಳಿಗೆ ಮೇವು ವಿತರಣೆ, ಹೀಗೆ ಸಮಾಜಮುಖಿಯಾದ ಕಾರ್ಯಕ್ರಮಗಳು ಜಾರಿಯಲ್ಲಿವೆ. ಇವುಗಳನ್ನು ಅನುಷ್ಠಾನಗೊಳಿಸಲು ವಿಶ್ವವಿದ್ಯಾಲಯದ ಸಿಬ್ಬಂದಿಗಳನ್ನು ನಿಯೋಜಿಸಿದ್ದು, ಮುಂಚೂಣಿ ಕಾರ್ಯಕರ್ತರಾಗಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳಿಗೆ ವಿಶ್ವವಿದ್ಯಾಲಯದ ಯುಥ್ ರೆಡ್ ಕ್ರಾಸ್ ಕೋಶದ ವತಿಯಿಂದ ಮುಂಜಾಗ್ರತ ಕ್ರಮವಾಗಿ ಕೋವಿಡ್ ಕಿಟ್‌ನ್ನು ವಿತರಿಸಲಾಯಿತು. ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ವಿಷ್ಣುಕಾಂತ ಎಸ್.ಚಟಪಲ್ಲಿ ಅವರ ಮಾರ್ಗದರ್ಶನ ಹಾಗೂ ಕುಲಸಚಿವರಾದ ಪ್ರೊ.ಬಸವರಾಜ ಎಲ್.ಲಕ್ಕಣ್ಣವರ ಸಹಕಾರದೊಂದಿಗೆ, ಅವರಲ್ಲಿ ಆತ್ಮವಿಶ್ವಾಸ ತುಂಬಿಸುವುದರ ಜೊತೆಗೆ ಅವರ ಸ್ವಕಾಳಜಿಯನ್ನು ಮಾಡಿಕೊಂಡು ಇನ್ನೂ ಉತ್ತಮ ಸೇವೆಯನ್ನು ನೀಡುವಂತಾಗಲಿ ಎಂಬ ಆಶಾಭಾವನೆಯೊಂದಿಗೆ ಪ್ರೇರೇಪಿಸಲು ಪ್ರಯತ್ನಿಸಲಾಗುತ್ತಿದೆ.

ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ವಿಶೇಷಾಧಿಕಾರಿಗಳಾದ ಉಮೇಶ ಬಾರಕೇರ, ಗಿರೀಶ್ ದೀಕ್ಷಿತ್, ಸಹಾಯಕ ನಿರ್ದೇಶಕರು, ಸಂಶೋಧನೆ, ಅನ್ವೇಷಣೆ ಮತ್ತು ಮೌಲ್ಯಮಾಪನ ಕೇಂದ್ರ ಹಾಗೂ ಶಶಿಭೂಷಣ ದೇವೂರ, ಅಧೀಕ್ಷಕರು, ಆಡಳಿತ ವಿಭಾಗ ಉಪಸ್ಥಿತರಿದ್ದರು. ಡಾ.ಗೂಳಪ್ಪ ಡಿ., ನೋಡಲ್ ಅಧಿಕಾರಿ, ಯುಥ್ ರೆಡ್ ಕ್ರಾಸ್, ಇವರು ಕಾರ್ಯಕ್ರಮವನ್ನು ನೆರವೇರಿಸಿದರು. ಸೋಮಲಿಂಗ ಕರ್ಣಿ, ಕಾರ್ಯಕ್ರಮ ಅಧಿಕಾರಿ, ಯುಥ್ ರೆಡ್ ಕ್ರಾಸ್ ಕೋಶ, ಕಾರ್ಯಕ್ರಮ ಆಯೋಜಿಸಿದ್ದರು.

# ಗ್ರಾಪಂರಾ ವಿವಿಯಿಂದ ಕೋವಿಡ್ ಕಿಟ್ ವಿತರಣೆ



ಗದಗ, ಮೇ. 15. ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗದಗ, ಸಭಾಂಗಣದಲ್ಲಿ ಯುಥ್‌ರೆಡ್ ಕ್ರಾಸ್‌ಕೋಶದ ವತಿಯಿಂದ ಮುಂಚೂಣಿ ಕಾರ್ಯಕರ್ತರಿಗೆ ಕೋವಿಡ್ ಕಿಟ್‌ನ್ನು ವಿತರಿಸಲಾಯಿತು.

ವಿಶ್ವವಿದ್ಯಾಲಯವು ಕೋವಿಡ್ ಲಾಕಡೌನ್ ಸಂದರ್ಭದಲ್ಲಿ ಸಾರ್ವಜನಿಕವಾಗಿ ತುರ್ತು ಸೇವೆಗಳ ಅಗತ್ಯ ಹಾಗೂ ಆದ್ಯತೆಗನುಸಾರವಾಗಿ ಹಲವು ಉಪಕ್ರಮಗಳನ್ನು ಹಮ್ಮಿಕೊಂಡಿದ್ದು, ಕೋವಿಡ್ ರೋಗಿಗಳ ಸೇವಾ ನಿರತ ಸಿಬ್ಬಂದಿಗಳಿಗೆ ಹಾಗೂ ಜೊತೆ ಇರುವ ಸಂಬಂಧಿಕರಿಗೆ ಆಹಾರ ವಿತರಣಾ ಕಾರ್ಯಕ್ರಮ, ನೆರುವು ಸಹಾಯವಾಣಿ ಕೇಂದ್ರ, ಜಿಲ್ಲಾಡಳಿತ ಸಹಯೋಗದೊಂದಿಗೆ ವಾರ್-ರೂಮ್ ಸ್ಥಾಪನೆ, ರಕ್ತದಾನ ಹಾಗೂ ಪ್ಲಾಸ್ಮಾದಾನ ಅರಿವು ಹಾಗೂ ಪ್ರೇರೇಪಣೆ, ಬೀದಿ ಬದಿಯ ದನಕರುಗಳು ಹಾಗೂ ಜಾನುವಾರುಗಳಿಗೆ ಮೇವು ವಿತರಣೆ, ಹೀಗೆ ಸಮಾಜ ಮುಖಿಯಾದ ಕಾರ್ಯಕ್ರಮಗಳು ಜಾರಿಯಲ್ಲಿವೆ. ಇವುಗಳನ್ನು ಅನುಷ್ಠಾನಗೊಳಿಸಲು ವಿಶ್ವವಿದ್ಯಾಲಯದ ಸಿಬ್ಬಂದಿಗಳನ್ನು ನಿಯೋಜಿಸಿದ್ದು, ಮುಂಚೂಣಿ ಕಾರ್ಯಕರ್ತರಾಗಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳಿಗೆ ವಿಶ್ವವಿದ್ಯಾಲಯದ ಯುಥ್ ರೆಡ್ ಕ್ರಾಸ್‌ಕೋಶದ ವತಿಯಿಂದ ಮುಂಜಾಗ್ರ ತಕ್ರಮವಾಗಿ ಕೋವಿಡ್ ಕಿಟ್‌ನ್ನು ವಿತರಿಸಲಾಯಿತು.

ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ವಿಷ್ಣುಕಾಂತಎಸ್. ಚಟಪಲ್ಲಿ ಅವರ ಮಾರ್ಗದರ್ಶನ ಹಾಗೂ ಕುಲಸಚಿವರಾದ ಪ್ರೊ. ಬಸವರಾಜಎಲ್. ಲಕ್ಕಣ್ಣವರ ಅವರ ಸಹಕಾರದೊಂದಿಗೆ, ಅವರಲ್ಲಿ ಆತ್ಮವಿಶ್ವಾಸ ತುಂಬಿಸುವುದರಜೊತೆಗೆ ಅವರ ಸ್ವಾಳಜಿಯನ್ನು ಮಾಡಿಕೊಂಡು ಇನ್ನೂ ಉತ್ತಮ ಸೇವೆಯನ್ನು ನೀಡುವಂತಾಗಲಿ ಎಂಬ ಆಶಾಭಾವನೆಯೊಂದಿಗೆ ಪ್ರೇರೆಪಿಸಲು ಪ್ರಯತ್ನಿಸಲಾಗುತ್ತಿದೆ.

ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ವಿಶೇಷಾಧಿಕಾರಿ ಉಮೇಶ ಬಾರಕೇರ, ಗಿರಿಶ್ ದಿಕ್ಷಿತ್, ಸಹಾಯಕ ನಿರ್ದೇಶಕರು, ಸಂಶೋದನೆ, ಅನ್ವೇಷಣೆ ಮತ್ತು ಮೌಲ್ಯಮಾಪನ ಕೇಂದ್ರ ಹಾಗೂ ಶಶಿಭೂಷಣ ಬೇವೂರ, ಅಧೀಕ್ಷಕರು, ಆಡಳಿತ ವಿಭಾಗ ಉಪಸ್ಥಿತರಿದ್ದರು. ಡಾ. ಗೂಳಪ್ಪ ಡಿ., ನೋಡಲ್ ಅಧಿಕಾರಿ, ಯುಥ್‌ರೆಡ್‌ಕ್ರಾಸ್, ಇವರು ಕಾರ್ಯಕ್ರಮವನ್ನು ನೆರವೇರಿಸಿದರು, ಸೋಮಲಿಂಗ ಕರ್ಣಿ, ಕಾರ್ಯಕ್ರಮ ಅಧಿಕಾರಿ, ಯುಥ್ ರೆಡ್‌ಕ್ರಾಸ್ ಕೋಶ, ಇವರು ಕಾರ್ಯಕ್ರಮವನ್ನು ಆಯೋಜಿಸಿದರು.